**ಹೆಚ್ಚುವರಿ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1049/2022**

| | | | |
|---|---|---|---|
| **ಹೆಸರು** | **:** | **ಜಗದೀಶ ಕೆ ಜಿ** | **ಚಾಸಾ. 19** |
| **ತಂದೆಯ ಹೆಸರು** | **:** | **ಮಲ್ಲಿಕಾರ್ಜುನ** | **ಪ್ರಾ.ಸಾ. 3** |
| **ವಯಸ್ಸು** | **:** | **41 ವರ್ಷ** | **ದಿನಾಂಕಃ 14-08-2024** |
| **ಉದ್ಯೋಗ** | **:** | ಪೋಲಿಸ ಇನ್ಸಪೆಕ್ಟರ | |
| **ವಾಸಸ್ಥಳ** | **:** | **ಬೆಂಗಳೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 28-01-2021 ರಿಂದ 28-11-2021 ರವರೆಗೆ ಸುಲೇಪೇಟ ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 30-04-2022 ರಂದು ಈ ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡಿದ್ದೇನೆ. ಅದೇ ದಿನ ಮೃತ ಶ್ರೀಕಾಂತ ರವರ ಶವಪಂಚನಾಮೆ ವರದಿಯನ್ನು ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಜರುಗಿಸಿದ್ದೇನೆ. ಈಗ ನೋಡುತ್ತಿರುವ ನಿಪಿ-1 ರ ಶವಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿ-2 ಮತ್ತು 3 ರ ಭಾವಚಿತ್ರಗಳನ್ನು ಶವ ಪಂಚನಾಮೆ ಕಾಲಕ್ಕೆ ಪಡೆದಿದ್ದೇನೆ. ಅದೇ ದಿನ ಚಾಸಾ5 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಅದೇ ದಿನ ಲಾರಿ ಚಾಲಕನಾದ ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

ದಿನಾಂಕಃ 01-05-2022 ರಂದು ಬೆಳಿಗ್ಗೆ 9-10 ಗಂಟೆವರೆಗೆ ಚಾಸಾ-3 ಮತ್ತು 4 ರವರ ಸಮಕ್ಷಮ ಪ್ರಾಸಾ 1 ರವರು ತೋರಿಸಿದಂತೆ ಪಂಚನಾಮೆಯನ್ನು ಮಾಡಿದೇನೆ. ಈಗ ನೋಡುತ್ತಿರುವ ನಿಪಿ-4 ರ ಪಂಚನಾಮೆಯಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪಡೆದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಸುಲೇಪೇಟ ಪೋಲಿಸ ಠಾಣೆ ಆವರಣದಲ್ಲಿರುವ ಚಾಸಾ-16 ರವರಿಂದ ಲಾರಿ ಸಂಖ್ಯೆ MH 24 J 7922 ಮತು ಆಟೋ ಸಂಖ್ಯೇ KA 32 C 3434 ನೇದ್ದನ್ನು ಜಪ್ತಿ ಮಾಡಿ ಪಂಚರಾದ ಚಾಸಾ 3 ಮತ್ತು 4 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಮಾಡಿದ್ದೇನೆ. ಈಗ ನೋಡುತ್ತಿರುವ ನಿಪಿ-6 ರ ಜಪ್ತಿ

ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಜಪ್ತಿ ಪಂಚನಾಮೆ ಕಾಲಕ್ಕೆ ಪಡೆದ ಭಾವಚಿತ್ರವನ್ನು ಈಗಾಗಲೇ ನಿಪಿ-7, 11 ರಿಂದ 13 ಎಂದು ಗುರುತಿಸಲಾಗಿದೆ.

ದಿನಾಂಕಃ 05-05-2022 ರಂದು ಲಾರಿ ಮಾಲೀಕನಾದ ರಾಜಶೇಖರ ರವರಿಂದ GPA ಪಡೆದ ಅರುಣ ರವರಿಂದ ಇಂಡೆಮನಿಟಿ ಬಾಂಡ ಪಡೆದು ಜಪ್ತಿ ಮಾಡಿದ ಲಾರಿಯನ್ನು ಬಿಡುಗಡೆ ಮಾಡಿದ್ದೇನೆ. GPA ಯನು ನಿಪಿ-14 ಎಂದು, ಸದರಿ ಇಂಡೆಮನಿಟಿ ಬಾಂಡನ್ನು ನಿಪಿ-15 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-14(ಎ) ಮತ್ತು ನಿಪಿ-15(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 11 ಮತ್ತು 17 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಅದೇ ಸಮಯಕ್ಕೆ ಚಾಸಾ-17 ರವರಿಂದ ಕಲಂ 65(ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದಿದೇನೆ. ದಿನಾಂಕಃ 09-05-2022 ರಂದು ನಿಪಿ-8 ರ ಶವಪರೀಕ್ಷೆ ವರದಿಯನು ಪಡೆದಿದ್ದೇನೆ. ನಿಪಿ-8 ರಲ್ಲಿರುವ ನನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ದಿನಾಂಕಃ 03-06-2022 ರಂದು ಚಾಸಾ 1, 5 ಮತ್ತು 6 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರಗಳನ್ನು ನಿಪಿ-16 ರಿಂದ 18 ಎಂದು ಮತ್ತು ಅದರಲಿರುವ ನನ್ನ ಸಹಿಗಳನ್ನು ನಿಪಿ-16(ಎ), ನಿಪಿ-17(ಎ) ಮತ್ತು ನಿಪಿ-18(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 12 ರವರಿಂದ ನಿಪಿ-9 ರ IMV ವರದಿ, ಚಾಸಾ-16 ರ ಹೇಳಿಕೆ, ಚಾಸಾ-15 ರವರಿಂದ ಗುನ್ನೆ ಸ್ಥಳದ ನಕಾಶೆಯನು ಪಡೆದಿದ್ದೇನೆ. ನಿಪಿ-9 ರಲ್ಲಿರುವ ನನ್ನ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SHH ವಕೀಲರಿಂದಃ**

ಸುಲೇಪೇಟ ಪೋಲಿಸ ಠಾಣೆಯಿಂದ ಗುನ್ನೆ ಸ್ಥಳ 200 ಮಿ. ಅಂತರದಲ್ಲಿದೆ. ಗುನ್ನೆ ಸ್ಥಳದಿಂದ ಆಸ್ಪತ್ರೆಗೆ ಹೋಗಲು ಪೋಲಿಸ ಠಾಣೆಯ ಮುಂದೆಯಿಂದ ಹೋಗಬೇಕು ಎಂದರೆ ಸರಿ. ಘಟನೆಯಾದ ದಿನದಂದೇ ಪೋಲಿಸ ಠಾಣೆಗೆ ಮಾಹಿತಿ ಬಂದಿದೆ. ಮಾಹಿತಿ ಬಂದ ಮೇರೆಗೆ ಠಾಣಾಧಿಕಾರಿಗಳು ಗುನ್ನೆ ಸ್ಥಳಕ್ಕೆ ಹೋಗಿದ್ದರು. ಅಪಘಾತಕ್ಕೀಡಾದ ಆಟೋಪಪಿದಲ್ಲಿ 1+4 ಜನರು ಹೋಗುವ ಸಾಮರ್ಥ್ಯದ ವಾಹನವಾಗಿತ್ತು. ಚಾಲಕನ ಸ್ಥಳದಲ್ಲಿ ಚಾಲಕ ಮಾತ್ರ ಕುಳಿತುಕೊಳ್ಳಬಹುದು ಎಂದರೆ ಸರಿ. ಚಾಲಕನ ಸ್ಥಳದಲ್ಲಿ ಕುಳಿತ ಇನ್ನೊಬ್ಬ ವ್ಯಕ್ತಿ ಕುಳಿತರೆ ಜಂಪಿನಲ್ಲಿ ಆಟೋ ಹೋದಾಗ ಚಾಲಕನ ಪಕ್ಕದಲ್ಲಿ ಕುಳಿತ ವ್ಯಕ್ತಿ ಬೀಳುವ ಸಂಭವ ಇರುತ್ತದೆ ಎಂದರೆ ಸರಿಯಲ್ಲ.

ಪ್ರಾಸಾ 2 ರವರು ಚಾಲಕನ ಪಕ್ಕದಲ್ಲಿ ತನ್ನ ಮಗನಿಗೆ ಕೂಡಿಸದೇ ಇದ್ದಾಗ ಈ ಪ್ರಕರಣ ಆಗುವ ಸಂಭವ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅಲ್ಲಿದ್ದ ಘಟನಾ ಸ್ಥಳದಲ್ಲಿದ್ದ ಲಾರಿ ಚಾಲಕರು ತಮ್ಮ

ವಾಹನವನ್ನು ನಿಲ್ಲಿಸಿ ಊಟ ಮಾಡುತ್ತಾರೆ ಎಂದರೆ ಸರಿ. 2021-22 ರಲ್ಲಿ ಸೇಡಂ-ಚಿಂಚೋಳಿ ರಸ್ತೆ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ಪ್ರಾಸಾ 2 ರವರ ವಾಹನ ಚಾಲನಾ ಪರವಾನಿಗೆ ನಾನು ನೋಡಿದ್ದೇನೆ. ಆ ಸಮಯಕ್ಕೆ ಚಾಲನಾ ಪರವಾನಿಗೆ ಪ್ರಾಸಾ 2 ರವರ ಹತ್ತಿರ ಇತ್ತಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಅವರಿಗೆ ಹಾಜರುಪಡಿಸಲು ಹೇಳಿದ್ದೆ ಅದರೆ ಅವರು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಅಪಘಾತಕ್ಕೀಡಾದ ಆಟೋವಿನ ವಿಮೆ ದಾಖಲೆಯನ್ನು ಪಡೆದಿದ್ದೇನೆ. ಅಪಘಾತ ಸಮಯಕ್ಕೆ ಅಪಘಾತಕ್ಕೀಡಾದ ಆಟೋವಿನ ವಿಮೇ ಮುಗಿದಿತ್ತು. ಸದರಿ ಆಟೋವಿಗೆ ವಿಮೆ ಇಲ್ಲದಿರುವ ಕಾರಣ ಮತ್ತು ಪ್ರಾಸಾ 2 ರವರ ಹತ್ತಿರ ವಾಹನ ಚಾಲನಾ ಪರವಾನಿಗೆ ಇಲ್ಲದಿರುವ ಕಾರಣ ಆರೋಪಿ ಹಾಗೂ ಲಾರಿ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ರಸ್ತೆಯ ಎಡಭಾಗದಲ್ಲಿ ವಾಹನಗಳು ಚಲಿಸುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ವಾಹನಗಳು ನಿಂತಿರುವ ಭಾವಚಿತ್ರ ಪಡೆದಿಲ್ಲ. ಲಾರಿ ಚಾಲಕನ ತಪ್ಪಿ ನಿಂದ ಅಪಘಾತ ಆಗಿಲ್ಲ ಮತ್ತು ಆಟೋ ಚಾಲಕನ ತಪ್ಪಿ ನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಅವನ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**